# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ</u>

ಎಸ್‌ಸಿ ನಂ. 32/2018

ಸಿಡಬ್ಲ್ಯೂ: 20 / ಪಿಡಬ್ಲ್ಯೂ: 5

ದಿನಾಂಕ: 02.12.2024

<u>ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.</u>

| | | |
|---|---|---|
| ಸಾಕ್ಷಿದಾರರ ಹೆಸರು | : | ದೌಲತ್ ಎನ್. ಕೆ. |
| ತಂದೆಯ ಹೆಸರು | : | ನಬಿಸಾಹೇಬ |
| ವಯಸ್ಸು | : | 46 ವರ್ಷ |
| ಉದ್ಯೋಗ | : | ಪೋಲೀಸ್ ಇನ್ಸಪೆಕ್ಟರ್, ಮುಧೋಳ, ಜಿಲ್ಲೆ: ಕಲಬುರ್ಗಿ |
| ವಾಸ ಸ್ಥಳ | : | ಮುಧೋಳ |

## <u>ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:</u>

1. ನಾನು ಗದಗ ಶಹರ ಪೋಲೀಸ ಠಾಣೆಯಲ್ಲಿ ದಿ: 23.10.2017 ರಿಂದ 30.12.2018 ರ ವರೆಗೆ ಗದಗ ಶಹರ ವೃತ್ತದ ಸಿಪಿಐ ಆಗಿ ಕರ್ತವ್ಯ ಮಾಡಿದ್ದೇನೆ.

2. ದಿ: 24.01.2018 ರಂದು, ಬೆಳಿಗ್ಗೆ 08.00 ಗಂಟೆಗೆ ನಾನು ಠಾಣೆಯಲ್ಲಿದ್ದಾಗ, ಚಾಸಾ-19 ರವರು 8 ಜನ ಆರೋಪಿಗಳನ್ನು ಹಾಗೂ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ನನ್ನ ಮುಂದೆ ಹಾಜರಪಡಿಸಿರುತ್ತಾರೆ. ಚಾಸಾ-19 ರವರು ಈ ಪ್ರಕರಣವನ್ನು ದಾಖಲಿಸಿಕೊಂಡು, ಮೂಲ ದೂರನ್ನು ಹಾಗೂ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳಿಸಿಕೊಟ್ಟಿರುತ್ತಾರೆ. ಚಾಸಾ-19 ರವರು ಈಗ ಮೃತಪಟ್ಟಿರುತ್ತಾರೆ.

3. ಈಗ ದೂರನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-17 ಎಂದು ಗುರುತಿಸಲಾಗಿದ್ದು, **ಚಾಸಾ-19 ರವರ ಎರಡು ಸಹಿಗಳನ್ನು ನಿಪಿ-17(ಬಿ) ಎಂದು ಗುರುತಿಸಲಾಯಿತು.**

**4. ಈಗ ಪ್ರಥಮ ವರ್ತಮಾನ ವರದಿಯನ್ನು ನೋಡುತ್ತಿದ್ದು, ಅದನ್ನು ನಿಪಿ-19 ಎಂದು, ಚಾಸಾ-19 ರವರ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು.**

5. ನನ್ನ ಮುಂದೆ ಹಾಜರಪಡಿಸಿದ ಆ 8 ಜನರನ್ನು ನೋಡಿದರೆ ಗುರುತಿಸುತ್ತೇನೆ. ಅವರಲ್ಲಿ ಈ ದಿನ ನ್ಯಾಯಾಲಯದ ಮುಂದೆ 2, 3, 6 ಮತ್ತು 8 ನೇ ಆರೋಪಿಗಳು ಹಾಜರ ಇರುತ್ತಾರೆ. (ಉಳಿದ

1, 4, 5 ಮತ್ತು 7 ನೇ ಆರೋಪಿಗಳ ವಿರುದ್ಧ ಪ್ರಕರಣವನ್ನು ವಿಭಜಿಸಲಾಗಿರುತ್ತದೆ.)

6. ನಂತರ ನಾನು ಸದರಿ 8 ಜನ ಆರೋಪಿಗಳ ಸ್ವ-ಖುಷಿ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

7. ಈಗ 1 ನೇ ಆರೋಪಿಯ ಸ್ವ-ಖುಷಿ ಹೇಳಿಕೆಯನ್ನು ನೋಡುತ್ತಿದ್ದು, ಅದನ್ನು ನಿಪಿ-20 ಎಂದು, ಸಾಕ್ಷಿಯ 4 ಸಹಿಗಳನ್ನು ಒಟ್ಟಾಗಿ ನಿಪಿ-20(ಎ) ಎಂದು ಹಾಗೂ 1 ನೇ ಆರೋಪಿಯ 4 ಸಹಿಗಳನ್ನು ಒಟ್ಟಾಗಿ ನಿಪಿ-20(ಬಿ) ಎಂದು ಹಾಗೂ ಸಂಬಂಧಿಸಿದ ನಮೂದನ್ನು ನಿಪಿ-20(ಸಿ) ಎಂದು ಗುರುತಿಸಲಾಯಿತು.

8. ಈಗ 2 ನೇ ಆರೋಪಿಯ ಸ್ವ-ಖುಷಿ ಹೇಳಿಕೆಯನ್ನು ನೋಡುತ್ತಿದ್ದು, ಅದನ್ನು ನಿಪಿ-21 ಎಂದು, ಸಾಕ್ಷಿಯ 4 ಸಹಿಗಳನ್ನು ಒಟ್ಟಾಗಿ ನಿಪಿ-21(ಎ) ಎಂದು ಹಾಗೂ 2 ನೇ ಆರೋಪಿಯ 4 ಸಹಿಗಳನ್ನು ಒಟ್ಟಾಗಿ ನಿಪಿ-21(ಬಿ) ಎಂದು ಗುರುತಿಸಲಾಯಿತು.

9. ಈಗ 3 ನೇ ಆರೋಪಿಯ ಸ್ವ-ಖುಷಿ ಹೇಳಿಕೆಯನ್ನು ನೋಡುತ್ತಿದ್ದು, ಅದನ್ನು ನಿಪಿ-22 ಎಂದು, ಸಾಕ್ಷಿಯ 3 ಸಹಿಗಳನ್ನು ಒಟ್ಟಾಗಿ ನಿಪಿ-22(ಎ) ಎಂದು ಹಾಗೂ 3 ನೇ ಆರೋಪಿಯ 3 ಸಹಿಗಳನ್ನು ಒಟ್ಟಾಗಿ ನಿಪಿ-22(ಬಿ) ಎಂದು ಗುರುತಿಸಲಾಯಿತು.

10. ಈಗ 4 ನೇ ಆರೋಪಿಯ ಸ್ವ-ಖುಷಿ ಹೇಳಿಕೆಯನ್ನು ನೋಡುತ್ತಿದ್ದು, ಅದನ್ನು ನಿಪಿ-23 ಎಂದು, ಸಾಕ್ಷಿಯ 3 ಸಹಿಗಳನ್ನು ಒಟ್ಟಾಗಿ ನಿಪಿ-23(ಎ) ಎಂದು ಗುರುತಿಸಲಾಯಿತು. 4 ನೇ ಆರೋಪಿಯು ಸದರಿ ಸ್ವ-ಖುಷಿ ಹೇಳಿಕೆಗೆ ತನ್ನ ಮೂರು ಹೆಬ್ಬಟ್ಟಿನ ಗುರುತುಗಳನ್ನು ಹಾಕಿರುತ್ತಾನೆ. ಸಂಬಂಧಿಸಿದ ನಮೂದನ್ನು ನಿಪಿ-23(ಬಿ) ಎಂದು ಗುರುತಿಸಲಾಯಿತು.

11. ಈಗ 5 ನೇ ಆರೋಪಿಯ ಸ್ವ-ಖುಷಿ ಹೇಳಿಕೆಯನ್ನು ನೋಡುತ್ತಿದ್ದು, ಅದನ್ನು ನಿಪಿ-24 ಎಂದು, ಸಾಕ್ಷಿಯ 4 ಸಹಿಗಳನ್ನು ಒಟ್ಟಾಗಿ ನಿಪಿ-24(ಎ) ಎಂದು ಗುರುತಿಸಲಾಯಿತು. 5 ನೇ ಆರೋಪಿಯು ಸದರಿ ಸ್ವ-ಖುಷಿ ಹೇಳಿಕೆಗೆ ತನ್ನ ನಾಲ್ಕು ಹೆಬ್ಬಟ್ಟಿನ ಗುರುತುಗಳನ್ನು ಹಾಕಿರುತ್ತಾನೆ. ಸಂಬಂಧಿಸಿದ ನಮೂದನ್ನು ನಿಪಿ-24(ಬಿ) ಎಂದು ಗುರುತಿಸಲಾಯಿತು.

12. ಈಗ 6 ನೇ ಆರೋಪಿಯ ಸ್ವ-ಖುಷಿ ಹೇಳಿಕೆಯನ್ನು ನೋಡುತ್ತಿದ್ದು, ಅದನ್ನು ನಿಪಿ-25 ಎಂದು, ಸಾಕ್ಷಿಯ ಸಹಿಯನ್ನು ನಿಪಿ-25(ಎ) ಎಂದು ಹಾಗೂ 6 ನೇ ಆರೋಪಿಯ ಸಹಿಯನ್ನು ನಿಪಿ-25(ಬಿ) ಎಂದು ಗುರುತಿಸಲಾಯಿತು.

13. ಈಗ 7 ನೇ ಆರೋಪಿಯ ಸ್ವ-ಖುಷಿ ಹೇಳಿಕೆಯನ್ನು ನೋಡುತ್ತಿದ್ದು, ಅದನ್ನು ನಿಪಿ-26 ಎಂದು, ಸಾಕ್ಷಿಯ ಎರಡು ಸಹಿಗಳನ್ನು ಒಟ್ಟಾಗಿ ನಿಪಿ-26(ಎ) ಎಂದು ಹಾಗೂ 7 ನೇ ಆರೋಪಿಯ ಎರಡು ಸಹಿಗಳನ್ನು ಒಟ್ಟಾಗಿ ನಿಪಿ-26(ಬಿ) ಎಂದು ಗುರುತಿಸಲಾಯಿತು.

**14. ಈಗ 8 ನೇ ಆರೋಪಿಯ ಸ್ವ-ಖುಷಿ ಹೇಳಿಕೆಯನ್ನು ನೋಡುತ್ತಿದ್ದು, ಅದನ್ನು ನಿಪಿ-27 ಎಂದು, ಸಾಕ್ಷಿಯ ಐದು ಸಹಿಗಳನ್ನು ಒಟ್ಟಾಗಿ ನಿಪಿ-27(ಎ) ಎಂದು ಹಾಗೂ 8 ನೇ ಆರೋಪಿಯ ಐದು ಸಹಿಗಳನ್ನು ಒಟ್ಟಾಗಿ ನಿಪಿ-27(ಬಿ) ಎಂದು ಹಾಗೂ ಸಂಬಂಧಿಸಿದ ನಮೂದನ್ನು ನಿಪಿ-27(ಸಿ) ಎಂದು ಗುರುತಿಸಲಾಯಿತು.**

15. ನಂತರ 8 ಜನ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೇನೆ. ನಂತರ ಸಾಕ್ಷಿದಾರರಾದ ಚಾಸಾ-4, 5, ಪ್ರಾಸಾ-3, ಚಾಸಾ-7 ರಿಂದ 16 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

16. ದಿಃ 25.01.2018 ರಂದು, 8 ಜನ ಆರೋಪಿಗಳನ್ನು ಪೋಲೀಸ ಕಸ್ಟಡಿಗೆ ಕೊಡಬೇಕೆಂದು ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತೇನೆ. ನ್ಯಾಯಾಲಯವು ದಿಃ 29.01.2018 ಮತ್ತು 30.01.2018 ರಂದು ಎರಡು ದಿನಗಳ ವರೆಗೆ ಸದರಿ 8 ಜನರನ್ನು ಪೋಲೀಸ ಕಸ್ಟಡಿಗೆ ಕೊಡಲಾಗಿರುತ್ತದೆ.

17. ನಂತರ, ಅದೇ ದಿನ ಸಂಜೆ 04.00 ಗಂಟೆಗೆ, ನಾನು, 1 ರಿಂದ 5 ಮತ್ತು 8 ನೇ ಆರೋಪಿಗಳನ್ನು, ಇಬ್ಬರು ಪಂಚರಾದ ರಸೂಲ ತಂದೆಃ ಮೆಹಬೂಬಸಾಬ ಮಲಬಾರ ಸಾಃ ಗದಗ ಮತ್ತು ಇಸ್ಮಾಯಿಲ್ ತಂದೆಃ ಹಜರೇಸಾಬ ಸೈಯದಅಲಿ ಸಾಃ ಗದಗ ಮತ್ತು ಠಾಣಾ ಸಿಬ್ಬಂದಿಯವರಾದ ಚಾಸಾ-5, ಪ್ರಾಸಾ-3, ಚಾಸಾ-7, 8, 11, 12 ರವರನ್ನು ಕರೆದುಕೊಂಡು ಸರ್ಕಾರಿ ವಾಹನ ನಂ. ಕೆಎ-26/ಜಿ-171 ನೇದ್ದರಲ್ಲಿ ನಮ್ಮ ಕಚೇರಿಯಿಂದ ಸಂಜೆ 04.20 ಗಂಟೆಗೆ ಹೊರಟು, 1 ರಿಂದ 5 ಮತ್ತು 8 ನೇ ಆರೋಪಿಗಳು ಹೇಳಿ ತೋರಿಸಿದಂತೆ, ಹಳೇ ಹುಬ್ಬಳ್ಳಿಯ ಗುಡಿಹಾಳ ರಸ್ತೆಯ ವಿಶಾಲ ನಗರದ ಮಸೀದಿ ಹತ್ತಿರ ಇರುವ ಒಂದು SBI ಬ್ಯಾಂಕಿಗೆ ಸಂಬಂಧಿಸಿದ ಎಟಿಎಂ ಗೆ ಹೋಗಿ ಅಲ್ಲಿ ಪಂಚನಾಮೆ ಮಾಡಲಾಗಿರುತ್ತದೆ.

18. ನಂತರ, 1, 2, 4 ಮತ್ತು 5 ನೇ ಆರೋಪಿಗಳು ಹೇಳಿದಂತೆ ಅಲ್ಲಿಂದ ನಮ್ಮನ್ನು ಹುಬ್ಬಳ್ಳಿಯ ಕಮರಿಪೇಟೆ ಹತ್ತಿರ ಇರುವ ತೊರವಿ ಹಕ್ಕಲ ಮಸೀದಿ ಹತ್ತಿರ ಕರೆದುಕೊಂಡು ಹೋಗಿ, ವಾಹನವನ್ನು ನಿಲ್ಲಿಸಲು ಹೇಳಿದ್ದು, ಆಗ ನಾವು ವಾಹವನ್ನು ನಿಲ್ಲಿಸಿದ್ದು, 1, 2, 4 ಮತ್ತು 5 ನೇ ಆರೋಪಿಗಳು ಅಲ್ಲಿಂದ ನಮ್ಮನ್ನು 2 ನೇ ಆರೋಪಿ ವಾಸವಾಗಿದ್ದ ಮಹ್ಮದ ಸೋಹಿಲಖಾನ ಇವರಿಗೆ ಸೇರಿದ ಬಾಡಿಗೆ ಮನೆ ಹತ್ತಿರ ಕರೆದುಕೊಂಡು ಹೋಗಿ, ಸದರಿ ಮನೆಯ ಒಳಗೆ ಇರುವ ಹಾಲ್ ನಲ್ಲಿ ಕರೆದುಕೊಂಡು ಹೋಗಿ, ಅಲ್ಲಿದ್ದ ಮೂರು ಬ್ಯಾಗುಗಳನ್ನು ಹಾಜರಪಡಿಸಿದ್ದು, 1 ನೇ ಆರೋಪಿ ಹಾಜರಪಡಿಸಿದ್ದ ಬ್ಯಾಗಿನಲ್ಲಿ ರೂ. 8000/- ಹಣ ಇತ್ತು ಮತ್ತು 5 ನೇ ಆರೋಪಿ ಹಾಜರಪಡಿಸಿದ್ದ ಬ್ಯಾಗಿನಲ್ಲಿ ರೂ. 7000/- ಹಣ ಇತ್ತು ಮತ್ತು 4 ನೇ ಆರೋಪಿ ಹಾಜರಪಡಿಸಿದ್ದ ಬ್ಯಾಗಿನಲ್ಲಿ ರೂ.

9000/- ಹಣ ಇತ್ತು. ಅಲ್ಲಿ ಪಂಚನಾಮೆ ಮಾಡಿ, ಸದರಿ ಹಣವನ್ನು ಜಪ್ತ ಮಾಡಿಕೊಂಡಿರುತ್ತೇನೆ.

19. ನಂತರ ಅಲ್ಲಿಂದ ನಾವೆಲ್ಲರೂ 8 ನೇ ಆರೋಪಿ ಹೇಳಿದತೆ, ಹಾವೇರಿಗೆ ಹೋಗಿದ್ದು, ಅಲ್ಲಿ 8 ನೇ ಆರೋಪಿಯು ನಮ್ಮನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ, ರೂ. 6000/- ಹಣ ಹಾಗೂ ರೂ. 80,000/- ಅಮಾನ್ಯವಾದ ಹಣವನ್ನು ಹಾಜರಪಡಿಸಿರುತ್ತಾನೆ. ಅಲ್ಲಿ ಪಂಚನಾಮೆ ಮಾಡಿ, ಸದರಿ ಹಣವನ್ನು ಜಪ್ತ ಮಾಡಿಕೊಂಡಿರುತ್ತೇನೆ. ಆ ಕಾಲಕ್ಕೆ ಫೋಟೋಗಳನ್ನು ತೆಗೆಸಲಾಗಿರುತ್ತದೆ. (ಸದರಿ ಫೋಟೋಗಳನ್ನು ದೋಷಾರೋಪಣ ಪತ್ರದೊಂದಿಗೆ ಲಗತ್ತಿಸಿರುವುದಿಲ್ಲ.) **ನಾನು ತಯಾರಿಸಿದ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-28 ಎಂದು, ಸಾಕ್ಷಿಯ ಎರಡು ಸಹಿಗಳನ್ನು ಒಟ್ಟಾಗಿ ನಿಪಿ-28(ಎ) ಎಂದು ಗುರುತಿಸಲಾಯಿತು.**

20. ನಂತರ ನಾವೆಲ್ಲರೂ ಠಾಣೆಗೆ ವಾಪಸ್ ಬಂದಿದ್ದು, ನಂತರ 8 ಜನ ಆರೋಪಿಗಳನ್ನು ಠಾಣೆಯಲ್ಲಿ ಇರಿಸಲಾಯಿತು.

21. ದಿಃ 30.01.2018 ರಂದು, ಜಪ್ತಾದ ಹಣಕ್ಕೆ ಸಂಬಂದಿಸಿದಂತೆ ನ್ಯಾಯಾಲಯಕ್ಕೆ ಮಾಲುಪಟ್ಟಿಯನ್ನು ಸಲ್ಲಿಸಿರುತ್ತೇನೆ. ನಂತರ ಚಾಸಾ-5, ಪ್ರಾಸಾ-3, ಚಾಸಾ-7, 8, 11, 12 ರವರ ಪುನಃ ಹೇಳಿಕೆಗಳನ್ನು ತೆಗೆದುಕೊಂಡಿರುತ್ತೇನೆ. ಅದೇ ದಿನ 8 ಜನ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೇನೆ.

22. ದಿಃ 02.02.2018 ರಂದು ಹೆಸ್ಕಾಂ ಶಾಖಾಧಿಕಾರಿಗಳಿಂದ ದಿಃ 24.01.2018 ರಂದು ಬೆಳಿಗ್ಗೆ 01.00 ರಿಂದ 06.00 ರ ವರೆಗೆ ವಿದ್ಯುತ್ ಸರಬರಾಜು ಇದ್ದ ಬಗ್ಗೆ ಪ್ರಮಾಣ ಪತ್ರವನ್ನು ನಿಪಿ-18 ರಂತೆ ಪಡೆದುಕೊಂಡಿರುತ್ತೇನೆ. ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ-18(ಬಿ) ಎಂದು ಗುರುತಿಸಲಾಯಿತು.

23. ದಿಃ 12.02.2018 ರಂದು, ಪ್ರಕರಣದಲ್ಲಿಯ ಜಪ್ತ ಮಾಡಿದ ಮುದ್ದೆ ಮಾಲುಗಳನ್ನು ಸಂಬಂಧ ಪಟ್ಟ ಪೊಪೇಲೀಸ ಠಾಣೆಗೆ ವರ್ಗಾಯಿಸಲು ನ್ಯಾಯಾಲಯದ ಅನುಮತಿಯನ್ನು ಪಡೆದುಕೊಂಡಿರುತ್ತೇನೆ.

24. ದಿಃ 31.03.2018 ರಂದು ಕಾರ ನಂ. ಎಂ.ಹೆಚ್-2/ಬಿ.ಆರ್. 3332 ನೇದ್ದರ ಮತ್ತು ಕಾರ ನಂ. ಕೆಎ-27/ಎಂ.7682 ರ ಹಾಗೂ ಬೈಕ ನಂ. ಕೆಎ-20/ಎಕ್ಸ-7926 ನೇದ್ದವುಗಳ "B" ಎಕ್ಸಟ್ರ್ಯಾಕ್ಟನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ನ್ಯಾಯಾಲಯಕ್ಕೆ ದೋಷಾರೋಪಣೆಯನ್ನು ಸಲ್ಲಿಸಿರುತ್ತೇನೆ.

25. **ಕಾರ ನಂ. ಎಂ.ಹೆಚ್-2/ಬಿ.ಆರ್. 3332 ನೇದ್ದರ "B" ಎಕ್ಸಟ್ರ್ಯಾಕ್ಟನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-29 ಎಂದು, ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ-29(ಎ) ಎಂದು**

ಗುರುತಿಸಲಾಯಿತು.

26. ಕಾರ ನಂ. ಕೆಎ-27/ಎಂ.7682 ನೇದ್ದರ "B" ಎಕ್ಸಟ್ರ್ಯಾಕ್ಟನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-30 ಎಂದು, ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ-30(ಎ) ಎಂದು ಗುರುತಿಸಲಾಯಿತು.

27. ಬೈಕ ನಂ. ಕೆಎ-20/ಎಕ್ಸ-7926 ನೇದ್ದರ "B" ಎಕ್ಸಟ್ರ್ಯಾಕ್ಟನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-31 ಎಂದು, ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ-31(ಎ) ಎಂದು ಗುರುತಿಸಲಾಯಿತು.

## ಪಾಟಿ ಸವಾಲುಃ ಶ್ರೀ ಐ.ಎ. ಬೇಪಾರಿ, 8 ನೇ ಆರೋಪಿ ಪರ ವಕೀಲರಿಂದಃ

28. ಫ್ರಾಸಾ-1 ರವರು, ನಿಪಿ-1 ಪಂಚನಾಮೆಯ ಪ್ರಿಂಟನ್ನು ಸ್ಥಳದಲ್ಲಿಯೇ ತೆಗೆದಿರುತ್ತಾರೆ. ಈ ಬಗ್ಗೆ ನಾನು ಫ್ರಾಸಾ-1 ರವರ ಹೇಳಿಕೆಯನ್ನು ತೆಗೆದುಕೊಂಡಿರುವುದಿಲ್ಲ. ನಿಪಿ-1 ನ್ನು ಠಾಣೆಯಲ್ಲಿಯೇ ಗಣಕೀಕರಣ ಮಾಡಿಸಿ, ಅದರ ಪ್ರಿಂಟನ್ನು ತೆಗೆಯಲಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಗಳು ನನ್ನ ಮುಂದೆ ಯಾವುದೇ ಸ್ವ-ಇಚ್ಛಾ ಹೇಳಿಕೆಗಳನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಸ್ವ-ಇಚ್ಛಾ ಹೇಳಿಕೆಗಳನ್ನು ತಯಾರಿಸಲಾಗಿದೆ ಎಂದರೆ ಸರಿಯಲ್ಲ.

29. ಸ್ಥಳೀಯ ಹುಬ್ಬಳ್ಳಿಯ ಪೋಲೀಸರ ಸಹಾಯವನ್ನು ಪಡೆದುಕೊಳ್ಳಲಾಗಿದೆಯೇ ಎಂದರೆ ಸಾಕ್ಷಿಯು ಅದರ ಅಗತ್ಯ ಇರುವುದಿಲ್ಲ ಎಂದು ಹೇಳಿರುತ್ತಾರೆ. ಹುಬ್ಬಳ್ಳಿಯ ಪೋಲೀಸರಿಂದ ದಾಖಲೆಯನ್ನು ಪಡೆದುಕೊಂಡಿರುವುದಿಲ್ಲ.

30. ನಿಪಿ-28 ನ್ನು ಗಣಕೀಕರಣ ಮಾಡಲಾಗಿರುತ್ತದೆ ಎಂದರೆ ಸರಿ. ನಿಪಿ-28 ರಲ್ಲಿ ಅದರ ಗಣಕೀಕರಣದ ಪ್ರಿಂಟನ್ನು ಎಲ್ಲಿ ತೆಗೆಯಲಾಗಿದೆ ಎಂಬ ಬಗ್ಗೆ ಅದರಲ್ಲಿ ನಮೂದು ಮಾಡಲಾಗಿಲ್ಲ ಎಂದರೆ ಸರಿ. ನಿಪಿ-28 ನ್ನು ಈ ಪ್ರಕರಣಕ್ಕೆ ಅನುಕೂಲವಾಗುವ ಹಾಗೆ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ.

31. ದಿಃ 24.01.2018 ರಂದು, ಬೆಳಿಗ್ಗೆ 08.00 ಗಂಟೆಗೆ ನಾನು ಠಾಣೆಯಲ್ಲಿದ್ದಾಗ, ಚಾಸಾ-19 ರವರು 8 ಜನ ಆರೋಪಿಗಳನ್ನು ಹಾಗೂ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ನನ್ನ ಮುಂದೆ ಹಾಜರಪಡಿಸಿರುತ್ತಾರೆ ಮತ್ತು ಚಾಸಾ-19 ರವರು ಈ ಪ್ರಕರಣವನ್ನು ದಾಖಲಿಸಿಕೊಂಡು, ಮೂಲ ದೂರನ್ನು ಹಾಗೂ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳಿಸಿಕೊಟ್ಟಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

32. ನಾನು ಸದರಿ 8 ಜನ ಆರೋಪಿಗಳ ಸ್ವ-ಖುಷಿ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

33. ಸಾಕ್ಷಿದಾರರಾದ ಚಾಸಾ-4, 5, ಪ್ರಾಸಾ-3, ಚಾಸಾ-7 ರಿಂದ 16 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

34. ಅದೇ ದಿನ ಸಂಜೆ 04.00 ಗಂಟೆಗೆ, ನಾನು, 1 ರಿಂದ 5 ಮತ್ತು 8 ನೇ ಆರೋಪಿಗಳನ್ನು, ಇಬ್ಬರು ಪಂಚರಾದ ರಸೂಲ ತಂದೆಃ ಮೆಹಬೂಬಸಾಬ ಮಲಬಾರ ಸಾಃ ಗದಗ ಮತ್ತು ಇಸ್ಮಾಯಿಲ್ ತಂದೆಃ ಹಜರೇಸಾಬ ಸೈಯದಅಲಿ ಸಾಃ ಗದಗ ಮತ್ತು ಠಾಣಾ ಸಿಬ್ಬಂದಿಯವರಾದ ಚಾಸಾ-5, ಪ್ರಾಸಾ-3, ಚಾಸಾ-7, 8, 11, 12 ರವರನ್ನು ಕರೆದುಕೊಂಡು ಸರ್ಕಾರಿ ವಾಹನ ನಂ. ಕೆಎ-26/ಜಿ-171 ನೇದ್ದರಲ್ಲಿ ನಮ್ಮ ಕಚೇರಿಯಿಂದ ಸಂಜೆ 04.20 ಗಂಟೆಗೆ ಹೊರಟು, 1 ರಿಂದ 5 ಮತ್ತು 8 ನೇ ಆರೋಪಿಗಳು ಹೇಳಿ ತೋರಿಸಿದಂತೆ, ಹಳೇ ಹುಬ್ಬಳ್ಳಿಯ ಗುಡಿಹಾಳ ರಸ್ತೆಯ ವಿಶಾಲ ನಗರದ ಮಸೀದಿ ಹತ್ತಿರ ಇರುವ ಒಂದು SBI ಬ್ಯಾಂಕಿಗೆ ಸಂಬಂಧಿಸಿದ ಎಟಿಎಂ ಗೆ ಹೋಗಿ ಅಲ್ಲಿ ಪಂಚನಾಮೆ ಮಾಡಲಾಗಿರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

35. ನಂತರ, 1, 2, 4 ಮತ್ತು 5 ನೇ ಆರೋಪಿಗಳು ಹೇಳಿದಂತೆ ಅಲ್ಲಿಂದ ನಮ್ಮನ್ನು ಹುಬ್ಬಳ್ಳಿಯ ಕಮರಿಪೇಟೆ ಹತ್ತಿರ ಇರುವ ತೊರವಿ ಹಕ್ಕಲ ಮಸೀದಿ ಹತ್ತಿರ ಕರೆದುಕೊಂಡು ಹೋಗಿ, ವಾಹನವನ್ನು ನಿಲ್ಲಿಸಲು ಹೇಳಿದ್ದು, ಆಗ ನಾವು ವಾಹವನ್ನು ನಿಲ್ಲಿಸಿದ್ದು, 1, 2, 4 ಮತ್ತು 5 ನೇ ಆರೋಪಿಗಳು ಅಲ್ಲಿಂದ ನಮ್ಮನ್ನು 2 ನೇ ಆರೋಪಿ ವಾಸವಾಗಿದ್ದ ಮಹ್ಮದ ಸೋಹಿಲಖಾನ ಇವರಿಗೆ ಸೇರಿದ ಬಾಡಿಗೆ ಮನೆ ಹತ್ತಿರ ಕರೆದುಕೊಂಡು ಹೋಗಿ, ಸದರಿ ಮನೆಯ ಒಳಗೆ ಇರುವ ಹಾಲ್ ನಲ್ಲಿ ಕರೆದುಕೊಂಡು ಹೋಗಿ, ಅಲ್ಲಿದ್ದ ಮೂರು ಬ್ಯಾಗುಗಳನ್ನು ಹಾಜರಪಡಿಸಿದ್ದು, 1 ನೇ ಆರೋಪಿ ಹಾಜರಪಡಿಸಿದ್ದ ಬ್ಯಾಗಿನಲ್ಲಿ ರೂ. 8000/- ಹಣ ಇತ್ತು ಮತ್ತು 5 ನೇ ಆರೋಪಿ ಹಾಜರಪಡಿಸಿದ್ದ ಬ್ಯಾಗಿನಲ್ಲಿ ರೂ. 7000/- ಹಣ ಇತ್ತು ಮತ್ತು 4 ನೇ ಆರೋಪಿ ಹಾಜರಪಡಿಸಿದ್ದ ಬ್ಯಾಗಿನಲ್ಲಿ ರೂ. 9000/- ಹಣ ಇತ್ತು. ಅಲ್ಲಿ ಪಂಚನಾಮೆ ಮಾಡಿ, ಸದರಿ ಹಣವನ್ನು ಜಪ್ತ ಮಾಡಿಕೊಂಡಿರುತ್ತೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

36. ನಂತರ ಅಲ್ಲಿಂದ ನಾವೆಲ್ಲರೂ 8 ನೇ ಆರೋಪಿ ಹೇಳಿದತೆ, ಹಾವೇರಿಗೆ ಹೋಗಿದ್ದು, ಅಲ್ಲಿ 8 ನೇ ಆರೋಪಿಯು ನಮ್ಮನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ, ರೂ. 6000/- ಹಣ ಹಾಗೂ ರೂ. 80,000/- ಅಮಾನ್ಯವಾದ ಹಣವನ್ನು ಹಾಜರಪಡಿಸಿರುತ್ತಾನೆ ಮತ್ತು ಅಲ್ಲಿ ಪಂಚನಾಮೆ ಮಾಡಿ, ಸದರಿ ಹಣವನ್ನು ಜಪ್ತ ಮಾಡಿಕೊಂಡಿರುತ್ತೇನೆ ಮತ್ತು ಆ ಕಾಲಕ್ಕೆ ಫೋಟೋಗಳನ್ನು ತೆಗೆಸಲಾಗಿರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

37. ಚಾಸಾ-5, ಪ್ರಾಸಾ-3, ಚಾಸಾ-7, 8, 11, 12 ರವರ ಪುನಃ ಹೇಳಿಕೆಗಳನ್ನು ತೆಗೆದುಕೊಂಡಿರುತ್ತೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

38. ದಿಃ 02.02.2018 ರಂದು ಹೆಸ್ಕಾಂ ಶಾಖಾಧಿಕಾರಿಗಳಿಂದ ದಿಃ 24.01.2018 ರಂದು ಬೆಳಿಗ್ಗೆ 01.00 ರಿಂದ 06.00 ರ ವರೆಗೆ ವಿದ್ಯುತ್ ಸರಬರಾಜು ಇದ್ದ ಬಗ್ಗೆ ಪ್ರಮಾಣ ಪತ್ರವನ್ನು ನಿಪಿ-18 ರಂತೆ ಪಡೆದುಕೊಂಡಿರುತ್ತೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

39. ದಿಃ 31.03.2018 ರಂದು ಕಾರ ನಂ. ಎಂ.ಹೆಚ್-2/ಬಿ.ಆರ್. 3332 ನೇದ್ದರ ಮತ್ತು ಕಾರ ನಂ. ಕೆಎ-27/ಎಂ.7682 ರ ಹಾಗೂ ಬೈಕ ನಂ. ಕೆಎ-20/ಎಕ್ಸ-7926 ನೇದ್ದವುಗಳ "B" ಎಕ್ಸಟ್ರ್ಯಾಕ್ಟನ್ನು ಪಡೆದುಕೊಂಡಿರುತ್ತೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

40. ಆರೋಪಿಗಳು ಯಾವುದೇ ಅಪರಾಧವನ್ನು ಮಾಡದೇ ಇದ್ದರೂ ಕೂಡಾ, ಅವರ ವಿರುದ್ಧ ಸುಳ್ಳು ದೋಷಾರೋಪಣ ಪತ್ರವನ್ನು ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಶ್ರೀ ಎಂ.ಎಂ. ಕುಕನೂರ, 2 ನೇ ಆರೋಪಿ ಪರ ವಕೀಲರಿಂದಃ**

**(ಶ್ರೀಮತಿ ಎ.ಜೆ.ಯು. ವಕೀಲರು 8 ನೇ ಆರೋಪಿ ಪರವಾಗಿ ಮಾಡಿದ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.)**

**ಪಾಟಿ ಸವಾಲುಃ ಶ್ರೀ ಜೆ.ವಿ. ಪಠಾಣ, 3 ನೇ ಆರೋಪಿ ಪರ ವಕೀಲರಿಂದಃ**

**(ಶ್ರೀಮತಿ ಆರ್.ಡಿ.ಕೆ. ವಕೀಲರು 8 ನೇ ಆರೋಪಿ ಪರವಾಗಿ ಮಾಡಿದ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.)**

**ಪಾಟಿ ಸವಾಲುಃ ಶ್ರೀ ಜಿ.ಡಿ.ಜೆ., 6 ನೇ ಆರೋಪಿ ಪರ ವಕೀಲರಿಂದಃ**

**(ಶ್ರೀಮತಿ ಆರ್.ಡಿ.ಎಲ್. ವಕೀಲರು 8 ನೇ ಆರೋಪಿ ಪರವಾಗಿ ಮಾಡಿದ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.)**

**ಮರು ವಿಚಾರಣೆ - ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಗದಗ**